

# ದೇವರಕೊಲ್ಲಿಯ ಎಳನೀರು ಜೆಲ್ಲಿ

**ಮಡಿಕೇರಿ–ಮಂಗಳೂರು ಹೆದ್ದಾರಿಯ ದೇವರಕೊಲ್ಲಿಯ ಸ್ಪೆಷಲ್ 'ಎಳನೀರು ಜೆಲ್ಲಿ'. ಪುಟ್ಟ ಅಂಗಡಿಗೆ ಎಳನೀರು ಜೆಲ್ಲಿಯೇ ಟ್ರೇಡ್ ಮಾರ್ಕ್. ಗ್ರಾಹಕರು ಅಂಗಡಿಯನ್ನು ಹುಡುಕಿಕೊಂಡು ಬರುವಷ್ಟರ ಮಟ್ಟಿಗೆ ಎಳನೀರು ಜೆಲ್ಲಿ ಪ್ರಸಿದ್ಧವಾಗಿದೆ.**

■ ಶ್ರೀ ಪಡ್ರೆ
ಚಿತ್ರಗಳು: ವಸುಧಾ ಭಟ್

ಮಡಿಕೇರಿ–ಮಂಗಳೂರು ಹೆದ್ದಾರಿ ಗೊತ್ತಲ್ಲ. ವಾಹನವನ್ನು ಕಟ್ಟೆಚ್ಚರದಿಂದ ಘಟ್ಟ ಇಳಿಸಬೇಕು. ಬಹುಪಾಲು ಇಳಿದಾಗ, ಜೋಡುಪಾಲ ಸಿಗುತ್ತದೆ. ಅದನ್ನೂ ದಾಟಿದರೆ ದೇವರಕೊಲ್ಲಿ. ಇದು ಮಡಿಕೇರಿಯಿಂದ 18 ಕಿಲೋಮೀಟರ್ ದೂರ.

ಏರು ಕಡಿಮೆಯಾಯಿತೆಂದು ನಿಟ್ಟುಸಿರು ಬಿಟ್ಟು, ಎಕ್ಸಿಲರೇಟರ್ ತುಳಿಯದಿರಿ. ಬದಲಾಗಿ, ಇನ್ನೂ ವೇಗ ಇಳಿಸಿ. ಆಚೀಚೆ ಗಮನಿಸುತ್ತಾ ಹೋಗಿ. ಸ್ಪೀಡಿನಲ್ಲಿ ಓಡಿಸಿದರೆ ಅಪೂರ್ವ ಹೊಸರುಚಿಯೊಂದನ್ನು ನೀವು ಕಳೆದುಕೊಳ್ಳುತ್ತೀರಿ!

ರಸ್ತೆ ಬದಿಯಲ್ಲಿ ಚಿಕ್ಕಪುಟ್ಟ ಹೋಟೆಲುಗಳು. ಬಲಬದಿಯಲ್ಲೇ ಇದೆ 'ವಸುಧಾ ಕ್ಯಾಂಟೀನ್'. ಕ್ಯಾಂಟೀನಿನ ಬೋರ್ಡಿನ ಪಕ್ಕದಲ್ಲೇ ಇನ್ನೊಂದು ಬೋರ್ಡು – 'ಎಳನೀರು (ಬೊಂಡ) ಜೆಲ್ಲಿ'ಯದು.

ಎಳನೀರು ಜೆಲ್ಲಿ ಕೇಳಿದ್ದೀರಾ? ಥಾಯ್ಲೆಂಡಿನಲ್ಲಿದು ಬಹುಜನಪ್ರಿಯ. ವ್ಯಾಪಕವಾಗಿ ಲಭ್ಯ. ಮಲೇಶ್ಯಾದಲ್ಲಿ ಪ್ರವಾಸಿ ಆಕರ್ಷಣೆ. ಎಳನೀರಿನ ಚಿಪ್ಪಿನೊಳಗೇ ಜೆಲ್ಲಿ ತಯಾರಿಸಿ ಸುಂದರವಾಗಿ ಪ್ಯಾಕ್ ಮಾಡಿ ತಂಪು ಪೆಟ್ಟಿಗೆಯಲ್ಲಿಟ್ಟು ಮಾರುತ್ತಾರೆ.

ಜೆಲ್ಲಿ ಎಳನೀರಿನ ಜ್ಯೂಸನ್ನೇ ಗಟ್ಟಿಯಾಗಿಸಿದ ಡೆಸರ್ಟ್. ಇದಕ್ಕೆ ಲಭ್ಯತೆ ಹೊಂದಿ ಎಳನೀರಿನ ಗಂಜಿಯನ್ನೂ ಸೇರಿಸುವುದಿದೆ. ದಕ್ಷಿಣ ಕನ್ನಡದವರಿಗೆ ಎಳನೀರು (ಎಳನೀರನ್ನು ದ.ಕ.ದಲ್ಲಿ ಬೊಂಡ, ಸೀಯಾಳ ಎಂದೂ ಕರೆಯುತ್ತಾರೆ) ಜೆಲ್ಲಿ ತಾಳೆ ಬೊಂಡದ (ತಾಟಿ ನುಂಗು) ನೆನಪು ತರಬಹುದು. ತಂಪಾಗಿಸಿ ಸವಿದರೆ ಮತ್ತೂ ರುಚಿಕರ.

ಥಾಯ್ಲೆಂಡ್, ಮಲೇಶ್ಯಾಗಳು ಎಳನೀರಿನ ಉತ್ಪನ್ನಗಳನ್ನು ಪ್ರವಾಸಿ ಆಕರ್ಷಣೆಯನ್ನಾಗಿಸಿವೆ. ನಮ್ಮ ಗಮನ ಆ ಕಡೆ ಹೋಗಿರುವುದೇ ಕಡಿಮೆ. ಎಳನೀರು ಜೆಲ್ಲಿಯ ಕಥೆಯೂ ಬೇರೆಯಲ್ಲ. ಕೇರಳ–ಕರ್ನಾಟಕಗಳಲ್ಲಿ ಈ ಉತ್ಪನ್ನ ಸಿಗುವ ಜಾಗ ಎಣಿಸಲು ಕೈಯ ಎಲ್ಲ ಬೆರಳುಗಳೂ ಬೇಡ.

ದೇವರಕೊಲ್ಲಿಯ ಅಂಗಡಿಗಳಿಗೆ ವಾಹನಿಗರೇ ಗ್ರಾಹಕ ದೇವರು. ನಾಗಾಲೋಟದವರ ಕಣ್ತಪ್ಪಬಹುದಾದಷ್ಟು ಚಿಕ್ಕ ಪ್ರದೇಶ ಇದು. ಇಂಥಲ್ಲೂ ಎಳನೀರು ಜೆಲ್ಲಿ ಸದಾ ಲಭ್ಯ. ನಾಲ್ಕು ವರ್ಷಗಳಿಂದ. ಕೋವಿಡ್ ಕಾರಣದಿಂದ ನಿಲ್ಲಿಸಿದ್ದನ್ನು ಗ್ರಾಹಕಪ್ರಭುಗಳ ಕೋರಿಕೆಯನ್ವಯ ಪುನರಾರಂಭಿಸಿದ್ದಾರೆ.